# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಮಾನ್ಯ ಸದಸ್ಯರ ಹೆಸರು:** | **ಡಾ. ಚಂದ್ರಶೇಖರ ಬಸವರಾಜ ಪಾಟೀಲ** |
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | **1651(1775)** |
| **ಉತ್ತರಿಸಬೇಕಾದ ದಿನಾಂಕ** | **23.03.2026** |
| **ಉತ್ತರಿಸುವ ಸಚಿವರು** | **ಮಾನ್ಯ ಉನ್ನತ ಶಿಕ್ಷಣ ಸಚಿವರು** |

| | | |
|---|---|---|
| ಅ) | ಉನ್ನತ ಶಿಕ್ಷಣ ಇಲಾಖೆಯಲ್ಲಿ ಪದವಿ ಮಹಾವಿದ್ಯಾಲಯದ ಪ್ರಾಧ್ಯಾಪಕರುಗಳಿಗೆ place (Grade Pay (1&2) increment ನೀಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, | ಉನ್ನತ ಶಿಕ್ಷಣ ಇಲಾಖೆಯಡಿ ಬರುವ ಕಾಲೇಜು ಶಿಕ್ಷಣ ಇಲಾಖೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಬೋಧಕರುಗಳಿಗೆ ಸಂಬಂಧಿಸಿದಂತೆ ಅಕಾಡೆಮಿಕ್ ಲೆವೆಲ್ 10 ರಿಂದ 11ರ ಪದೋನ್ನತಿಯ ನಂತರದಲ್ಲಿ ಮಹಾಲೇಖಪಾಲಕರ ಕಛೇರಿಯಿಂದ ವೇತನ ನಿಗದಿಗೊಳಿಸಿ ವೇತನ ಬಡ್ತಿ ಸೌಲಭ್ಯವನ್ನು ನೀಡಲಾಗುತ್ತಿದೆ. ಅಂತೆಯೇ ಅನುದಾನಿತ ಕಾಲೇಜುಗಳಿಗೆ ಸಂಬಂಧಿಸಿದಂತೆ, ಈ ಕೆಳಗಿನ ಸಂದರ್ಭಗಳಲ್ಲಿ ಸ್ಥಾನೀಕರಣದ ವೇತನ ನಿಗದೀಕರಣ ಮಾಡುವಾಗ, ಸರ್ಕಾರದ ಆದೇಶ ಸಂಖ್ಯೆ ದಿನಾಂಕ: 16-03-2019ರಲ್ಲಿ ನೀಡಲಾಗಿರುವ ಸೂಚನೆಯಂತೆ ವೇತನ ಬಡ್ತಿ ಸೌಲಭ್ಯ ನೀಡಲಾಗುತ್ತಿದೆ.<br><br>1. ಶೈಕ್ಷಣಿಕ ಹಂತ 10 ರಿಂದ ಶೈಕ್ಷಣಿಕ ಹಂತ 11ಕ್ಕೆ ಪದೋನ್ನತಿ ಹೊಂದಿದ ಸಂದರ್ಭದಲ್ಲಿ<br>2. ಶೈಕ್ಷಣಿಕ ಹಂತ 12 ರಿಂದ ಶೈಕ್ಷಣಿಕ ಹಂತ 13ಎ ಗೆ ಪದೋನ್ನತಿ ಹೊಂದಿದ್ದು, ಪದೋನ್ನತ ಸಿಬ್ಬಂದಿಯ ಮೂಲವೇತನವು 12 ನೇ ಶೈಕ್ಷಣಿಕ ಹಂತದ ಮೊದಲ 16 ಸೆಲ್‌ಗಳಲ್ಲಿ ನಮೂದಿಸಲಾಗಿರುವ ಮೂಲವೇತನಕ್ಕೆ ಸರಿಸಮನಾಗಿದ್ದ ಸಂದರ್ಭದಲ್ಲಿ<br>3. ಶೈಕ್ಷಣಿಕ ಹಂತ 13ಎ ರಿಂದ ಶೈಕ್ಷಣಿಕ ಹಂತ 14ಕ್ಕೆ ಪದೋನ್ನತಿ ಹೊಂದಿದ ಸಂದರ್ಭದಲ್ಲಿ<br>4. ಶೈಕ್ಷಣಿಕ ಹಂತ 14 ರಿಂದ ಶೈಕ್ಷಣಿಕ ಹಂತ 15ಕ್ಕೆ ಪದೋನ್ನತಿ ಹೊಂದಿದ ಸಂದರ್ಭದಲ್ಲಿ<br><br>ಶೈಕ್ಷಣಿಕ ಹಂತ 11 ರಿಂದ 12 ಮತ್ತು 12 ರಿಂದ 13A ಗೆ ವೇತನ ಬಡ್ತಿ ಸೌಲಭ್ಯ ನೀಡುವ ಸಂದರ್ಭದಲ್ಲಿ ಸರ್ಕಾರದ ಆದೇಶ ಸಂಖ್ಯೆ: ಇಡಿ 483 ಯುಎನ್‌ಇ 2017, ದಿನಾಂಕ:16-03-2019ರ ಕಂಡಿಕೆ (8)ರಂತೆ ಶೈಕ್ಷಣಿಕ ಹಂತ 11 ರಿಂದ 12 ಮತ್ತು 12 ರಿಂದ 13A ರ 17ನೇ ಸೆಲ್‌ನ ನಂತರದಲ್ಲಿ ವೇತನ ನಿಗದೀಕರಣ ಮಾಡುವ ಬಗ್ಗೆ ಆರ್ಥಿಕ ಇಲಾಖೆಯ ಸ್ಪಷ್ಟೀಕರಣವನ್ನು ಕೋರಲಾಗಿದ್ದು, ಅಭಿಪ್ರಾಯ ಸ್ವೀಕೃತವಾದ ನಂತರ ಪರಿಶೀಲಿಸಿ ವಾರ್ಷಿಕ ವೇತನ ಬಡ್ತಿ ಮಂಜೂರು ಮಾಡುವ ಬಗ್ಗೆ ಕ್ರಮವಹಿಸಲಾಗುವುದು. |
| ಆ) | ಬಂದಿದ್ದರೆ, ಯಾವ ಕಾಲಮಿತಿಯಲ್ಲಿ Place increment ನೀಡುವಂತೆ ನಿರ್ದೇಶನ ನೀಡಲಾಗುವುದು? | |

ಇಡಿ 40 ಯುಇಸಿ 2026

(ಡಾ. ಎಂ.ಸಿ. ಸುಧಾಕರ್)
ಉನ್ನತ ಶಿಕ್ಷಣ ಸಚಿವರು